# ಮಾರುತವತಾರನೀತ ನಮ್ಮ ಗುರು ಕಾಣಿರೋ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchhu Rayaru.
3. **Note:** Lyrics in both the references above are same.
4. **Note:** The singer has followed mainly these wordings. But he has added few more wordings and **not used the Ankita** mentioned here.

ರಾಗ: ಶಂಕರಾಭರಣ ತಾಳ: ಆದಿ

ಮಾರುತವತಾರನೀತ ನಮ್ಮ ಗುರು ಕಾಣಿರೋ
ಭಾರತಿಯ ರಮಣನೇ ಮೂಲ ಗುರು ಕಾಣಿರೋ || ಪ ||

ಸಂತತಿ ಸಹಿತ ರಾವಣ ಬಲವ ತರಿದ
ಹೊಂತಕಾರಿ ಹನುಮಂತ ನಮ್ಮ ಗುರು ಕಾಣಿರೋ
ಅಂತಕನ ಪುರಿಗೆ ಕೌರವರನು ಕಳುಹಿದ
ಪಂಥದೊಳು ಭೀಮಸೇನ ಮೂಲ ಗುರು ಕಾಣಿರೋ || 1 ||

ಯತಿ ರೂಪಿನಲಿ ಕ್ಷಿತಿಯ ಮೇಲೆ ನಿಂದು ದು-
ರ್ಮತವ ಖಂಡಿಸಿದಾತ ನಮ್ಮ ಗುರು ಕಾಣಿರೋ
ಶ್ರುತಿಗೆ ಸಮ್ಮತವಾದ ಮತವ ಸ್ಥಾಪಿಸಿ, ಮುಕ್ತಿ
ಪಥವ ತೋರಿಸಿದಾತ ಮೂಲ ಗುರು ಕಾಣಿರೋ || 2 ||

ಹೇಮ, ಭೂಮಿಯ, ಕಾಮಿನಿಯ ವ್ರತವನುಳಿದು ನಿ-
ಸ್ಸೀಮನೆನಿಸಿದಾತ ನಮ್ಮ ಗುರು ಕಾಣಿರೋ
ರಾಮಚಂದ್ರ ಪುರಂದರ ವಿಠಲನ ದಾಸರಾದ
ಶ್ರೀ ಮಧ್ವಾಚಾರ್ಯರೆ ನಮ್ಮ ಗುರು ಕಾಣಿರೋ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಮಾರುತವತಾರ –** ಮಾರುತನ ಅವತಾರ.

**ಸಂತತಿ ಸಹಿತ –** ರಾವಣನ ಒಬ್ಬ ಮಗನಾದ ಅಕ್ಷಯ ಕುಮಾರನನ್ನು ತಾನೇ ಕೊಂದು, ಇನ್ನೊಬ್ಬ ಮಗನಾದ ಇಂದ್ರಜಿತ್ತಿನ ಸಾವಿಗೆ ನೆರವಾದವನು.

**ಹೊಂತಕಾರಿ –** ನಾನಾ ಉಪಾಯಗಳನ್ನು ಬಲ್ಲವನು.

**ಅಂತಕನ ಪುರಿಗೆ –** ಯಮನ ಪಟ್ಟಣಕ್ಕೆ.

**ಕ್ಷಿತಿ** = ಭೂಮಿ

**ಹೇಮ ಭೂಮಿಯ ಕಾಮಿನಿಯ ವ್ರಾತವನುಳಿದು –** ಹೊನ್ನು, ಮಣ್ಣು, ಹೆಣ್ಣು ಇವುಗಳ ಗುಂಪಿನಿಂದ ದೂರವಾಗಿದ್ದು.

**Classification:** Keerthane
**Ankita:** purandara vittala
**Location:** NA
**Category:** Hanuma Stuti, Madhwacharya Stuti
**Sub-Category:** hanuma, hanuma-bhima-madhwa, bhima, madhva, rama, madhwacharya, ravana, yama, kourava, bhumi, shruti, mukti, bangara, hennu, vrata,
**Pravachana:** NA
**Explanation:** NA